# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಜಿಎಂ\242\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:27/09/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಧಾರವಾಡ ಜಿಲ್ಲೆ ಶಿಗ್ಗಾಂವ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಟಾಟಾ ಶಿವನ್ ರವರ ಕರ್ತವ್ಯ ಲೋಪದ ಬಗ್ಗೆ.

**********

ಶಿವಮೊಗ್ಗ ಜಿಲ್ಲೆ ವಿನೋಭ ನಗರ 1ನೇ ಹಂತ 5ಬಿ ಮುಖ್ಯ ರಸ್ತೆ ಜಲಧರ ನಿಲಯ #38ರ ನಿವಾಸಿಯಾದ ಶ್ರೀ.ಜಿ.ಎಂ.ಜಗದೀಶ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಧಾರವಾಡ ಜಿಲ್ಲೆ ಶಿಗ್ಗಾಂವ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಕಾರ್ಯಪಾಲಕ ಅಭಿಯಂತರರಾದ ಶ್ರೀ.ಟಾಟಾ ಶಿವನ್ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ ಮತ್ತು ಸರ್ಕಾರಿ ಸುತ್ತೋಲೆಗಳ ಉಲ್ಲಂಘಿಸಿ ದಿನಾಂಕ:04/01/18ರಂದು ಕರೆದ ಟೆಂಡರ್ ಪ್ರಕಟಣೆಯಲ್ಲಿ ಅರ್ಹ ಗುತ್ತಿಗೆದಾರರಿಗೆ ಟೆಂಡರ್ ಸಲ್ಲಿಸಲು ಕೇವಲ 8 ದಿನಗಳ ಕಾಲಾವಧಿಯನ್ನು ನೀಡಿ ಕರ್ತವ್ಯ ಲೋಪ ಎಸಗಿದ್ದಾರೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

1) ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:1492 ದಿನಾಂಕ:04/01/18ರಲ್ಲಿ ನಾಲ್ಕು ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. ಸದರಿ ಕಾಮಗಾರಿಗಳೆಂದರೆ –

ಅ) ತಡಸಾ ಗ್ರಾಮದ ದೇವಿಗುಡಿಯಿಂದ ಬೆಣ್ಣೆಹಳ್ಳದವರೆಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ;

ಆ) ತಡಸಾ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದಿಂದ ಬೆಣ್ಣಿಹಳ್ಳದವರೆಗೆ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ;

ಇ) ತೊಂಡೂರು–ಕಳಸೂರು ರಸ್ತೆ ಅಭಿವೃದ್ಧಿ;

ಈ) ಕಳಸೂರು ಬ್ಯಾರೇಜ್‌ನಿಂದ ತೊಂಡೂರು ವಯಾ ಜಾಕ್‌ವೆಲ್ ರಸ್ತೆ ಅಭಿವೃದ್ಧಿ;

2) ಸದರಿ ರಸ್ತೆಗಳು ತೀವ್ರ ಹದಗೆಟ್ಟಿರುವುದರಿಂದ, ಸಾರ್ವಜನಿಕರಿಗೆ ಓಡಾಡಲು ಬಹಳ ಕಷ್ಟವಾಗುತ್ತಿರುವುದರಿಂದ, ಸಂಬಂಧಪಟ್ಟ ಜನಪ್ರತಿನಿಧಿಗಳು ಕಾಮಗಾರಿಗಳಿಗೆ ಅವಶ್ಯವಿರುವ ಅನುದಾನವನ್ನು ಸಕ್ಷಮ ಪ್ರಾಧಿಕಾರದಿಂದ ದೊರಕಿಸಿಕೊಟ್ಟು ಕಾಮಗಾರಿಗಳನ್ನು ಕೂಡಲೇ ಕೈಗೊಳ್ಳುವಂತೆ ಕೋರಿದ್ದಾರೆ. ರಸ್ತೆಗಳ ವಾಸ್ತವ ಸ್ಥಿತಿ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಸುತ್ತೋಲೆ ನಂ.ಆಇ/195/ವೆಚ್ಚ–12/11 ದಿ:30\3\2011ರನ್ವಯ ಅಲ್ಪಾವಧಿ ಟೆಂಡರ್ ಕರೆಯಲು ಹಿರಿಯ ಪ್ರಾಧಿಕಾರವಾದ ಅಧೀಕ್ಷಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಮಲಪ್ರಭ ಬಲದಂಡೆ ಕಾಲುವೆ ನಿರ್ಮಾಣ ವೃತ್ತ, ಧಾರವಾಡ ರವರಿಂದ ದಿ:21/12/2017 ಮತ್ತು 28/12/17ರಲ್ಲಿ ಅನುಮತಿ ಪಡೆದು, ದಿನಾಂಕ:04/01/18ರಂದು ಟೆಂಡರ್ ಆಹ್ವಾನಿಸಲಾಗಿದೆ. ಆದ್ದರಿಂದ, ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮ ಉಲ್ಲಂಘನೆಯಾಗಿಲ್ಲವೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಸದರಿ ದೂರಿನ ದಿ:4/1/2018ರ ಪ್ರಶ್ನಿತ ಟೆಂಡರ್ ಪ್ರಕಟಣೆಯು ದಿನಾಂಕ:05/01/18ರ ವಿಜಯ ಕರ್ನಾಟಕ ಕನ್ನಡ ದಿನಪತ್ರಿಕೆ ಮತ್ತು ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನಪತ್ರಿಕೆ ಹಾಗೂ ದಿ:10/01/18ರ ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟವಾಗಿದ್ದು, ಸದರಿ ಟೆಂಡರ್ ಸಲ್ಲಿಸಲು ದಿನಾಂಕ:12/01/2018 ಕೊನೆಯ ದಿನವಾಗಿತ್ತು. ಸದರಿ ಟೆಂಡರ್‌ನ ಒಟ್ಟು ಮೊತ್ತ ₹100 ರಿಂದ 120 ಲಕ್ಷ ಮತ್ತು ₹90–93 ಲಕ್ಷ ಎಂದು ಹೇಳಿದೆ. ಕರ್ನಾಟಕ ಸರ್ಕಾರದ ಸುತ್ತೋಲೆ ಸಂ:ಲೋಇ/173/ ಸಿಎನ್‌ಹೆಚ್/2011 ದಿ:26/8/2011 ಮತ್ತು ಸುತ್ತೋಲೆ ಸಂ:ಆಇ/195/ವೆಚ್ಚ–12/11 ದಿ:30.3.2011ರಲ್ಲಿ ಹೇಳಿರುವಂತೆ, ಎರಡು ಕೋಟಿ ರೂಪಾಯಿಗಳ ವರೆಗಿನ ಟೆಂಡರ್‌ಗಳಿಗೆ, ಟೆಂಡರ್ ಆಹ್ವಾನಿಸುವ ನೋಟೀಸಿನ ಪ್ರಕಟಣೆಯ ದಿನಾಂಕ ಮತ್ತು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ನಡುವೆ ಕನಿಷ್ಟ ಸಮಯವನ್ನು ನಿಗದಿಪಡಿಸಿದೆ. ರೂಪಾಯಿ ಎರಡು ಕೋಟಿವರೆಗಿನ ಮೌಲ್ಯದ ಟೆಂಡರ್‌ಗಳಿಗೆ 30 ದಿನಗಳೆಂದು

N. Anand

ಬಿಎಂ/೭೪೭/18



ಮತ್ತು ರೂಪಾಯಿ ಎರಡು ಕೋಟಿಗಳಿಗಿಂತ ಹೆಚ್ಚಿನ ಮೌಲ್ಯದ ಟೆಂಡರ್‌ಗಳಿಗೆ 60 ದಿನಗಳೆಂದು ಸದರಿ ಸುತ್ತೋಲೆಗಳಲ್ಲಿ ಸಮಯವನ್ನು ನಿಗದಿಪಡಿಸಿದೆ. ಹಾಗೆ ಗೊತ್ತುಪಡಿಸಲಾದ ಸಮಯದಲ್ಲಿ ಯಾವುದೇ ಕಡಿತವನ್ನು ಮಾಡಬೇಕಾದರೆ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಕ್ಕಿಂತ ಹಿರಿಯ ಪ್ರಾಧಿಕಾರಿಯು ಲಿಖಿತ ರೂಪದಲ್ಲಿ ಕಾರಣಗಳನ್ನು ದಾಖಲು ಮಾಡಿ ನಿರ್ದಿಷ್ಟವಾಗಿ ಅಧಿಕೃತಗೊಳಿಸಬೇಕೆಂದು ಅದೇ ಸುತ್ತೋಲೆಗಳಲ್ಲಿ ಹೇಳಿದೆ. ಈ ವಿಷಯವನ್ನು ಕೆ.ಟಿ.ಪಿ.ಪಿ ನಿಯಮಾವಳಿಯ ನಿಯಮ 17(2)ರಲ್ಲೂ ಹೇಳಿದೆ;

2) ಈಗಾಗಲೇ ಹೇಳಿದಂತೆ ಸದರಿ ದೂರಿನಲ್ಲಿ ಟೆಂಡರ್ ಆಹ್ವಾನಿಸುವ ನೋಟಿಸಿನ ಪ್ರಕಟಣೆಯ ದಿನಾಂಕ ಮತ್ತು ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕದ ಮಧ್ಯೆ ಕೇವಲ 8 ದಿನಗಳ (4/1/2018 ರಿಂದ 12/1/2018) ಅಂತರವಿದೆ. ಸದರಿ ಪ್ರಕರಣದಲ್ಲಿ ಅಧೀಕ್ಷಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಮಲಪ್ರಭ ಬಲದಂಡೆ ಕಾಲುವೆ ನಿರ್ಮಾಣ ವೃತ್ತ, ಧಾರವಾಡ ರವರು ತಮ್ಮ ಪತ್ರ ಸಂ:2097 ದಿ:21/12/17 ಮತ್ತು ಪತ್ರ ಸಂ:2144 ದಿನಾಂಕ:28/12/17 ರಲ್ಲಿ ನೀಡಿದ ಅನುಮತಿಯಂತೆ ಸದರಿ ಕಾಮಗಾರಿಗಳನ್ನು ನಿರ್ವಹಿಸಲು ಅಲ್ಪಾವಧಿ ಟೆಂಡರ್ ಕರೆಯಲಾಗಿದೆ ಎಂದು ಎದುರುದಾರರು ತಮ್ಮ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ. ಸದರಿ ಅನುಮತಿಯ ಪ್ರತಿಯನ್ನು ಪರಿಶೀಲಿಸಲಾಗಿ ಸದರ ಅನುಮತಿಯು ಕೆ.ಟಿ.ಪಿ.ಪಿ. ನಿಯಮಾವಳಿಯ ನಿಯಮ 17(2) ಮತ್ತು ಮೇಲೆ ಹೇಳಿದ ಸರ್ಕಾರಿ ಸುತ್ತೋಲೆಗಳನ್ವಯ ಇಲ್ಲದೇ ಇರುವುದು ಕಂಡು ಬಂದಿದೆ. ಸದರಿ ದೂರಿನ ಟೆಂಡರನ್ನು ಆಹ್ವಾನಿಸಿದ ಪ್ರಾಧಿಕಾರಿ ಎದುರುದಾರರಾಗಿದ್ದು, ಅವರ ಹಿರಿಯ ಪ್ರಾಧಿಕಾರವು ನೀಡಿದ ಅನುಮತಿಯು ಕೆ.ಟಿ.ಪಿ.ಪಿ. ನಿಯಮಾವಳಿಯ ನಿಯಮ 17(2) ಮತ್ತು ಮೇಲೆ ಹೇಳಿದ ಸರ್ಕಾರಿ ಸುತ್ತೋಲೆಗಳನ್ವಯ ಇಲ್ಲದಿರುವುದನ್ನು ಪರಿಶೀಲಿಸದೇ ಟೆಂಡರ್ ನೋಟೀಸಿನ ಪ್ರಕಟಣೆಯ ದಿನಾಂಕ ಮತ್ತು ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕದ ನಡುವೆ ಕನಿಷ್ಟ ಸಮಯವನ್ನು ಎದುರುದಾರರು ನಿಗದಿಪಡಿಸದೇ, ನಿಯಮ ಮತ್ತು ಸುತ್ತೋಲೆಗಳನ್ನು ಉಲ್ಲಂಘಿಸಿ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

N. Anand

7. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

8. ಅದಲ್ಲದೆ ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ. ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 28/9

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**